**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**

**Spl.C.114/2023**

ದಿನಾಂಕ: 30.01.2026
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ -4 ಪ್ರಾಸಾ -2

| | | |
|---|---|---|
| ಹೆಸರು | ಃ | ಲಿಂಗೇಶ್ |
| ತಂದೆಯ ಹೆಸರು | ಃ | ಶಿವಲಿಂಗಯ್ಯ |
| ವಯಸ್ಸು | ಃ | 33 ವರ್ಷ |
| ಉದ್ಯೋಗ | ಃ | ಡಾಟಾ ಎಂಟ್ರಿ ಆಪರೇಟರ್,<br>ಕರ್ನಾಟಕ ಮಾಹಿತಿ ಆಯೋಗ |
| ವಾಸಸ್ಥಳ | ಃ | ಚನ್ನಪಟ್ಟಣ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನನ್ನ ಸ್ವಂತ ಊರು ಹಾರೋಕೊಪ್ಪ. ಪ್ರಾಸಾ.1 ಶಿವರಾಜು ಪರಿಶಿಷ್ಟ ಜಾತಿಗೆ ಸೇರಿದವರಾಗಿರುತ್ತಾರೆ. ಚಾಸಾ.2, 3, 5 ಮತ್ತು 6 ನನಗೆ ಗೊತ್ತು. ನ್ಯಾಯಾಲಯದ ಮುಂದಿರುವ 1 ಮತ್ತು 2ನೇ ಆರೋಪಿಗಳು ನನಗೆ ಗೊತ್ತು, ಅವರು ಗೌಡ ಜಾತಿಗೆ ಸೇರಿದವರಾಗಿರುತ್ತಾರೆ. ದಿಃ19.02.2023ರಂದು ಸಂಜೆ 6.30ರಿಂದ 7.00 ಗಂಟೆ ಸಮಯದಲ್ಲಿ ನಾನು ಜಗದಾಪುರದಿಂದ ಚನ್ನಪಟ್ಟಣಕ್ಕೆ ಬರುತ್ತಿರಬೇಕಾದರೆ ಕಾರೇಕೊಪ್ಪ ಗೇಟ್ ಹತ್ತಿರ ಪ್ರಾಸಾ.1 ಶಿವರಾಜು ಬೊಲೆರೋ ವಾಹನಕ್ಕೆ ಇಟ್ಟಿಗೆ ತುಂಬುತ್ತಿದ್ದರು. ಆಗ 1 ಮತ್ತು 2ನೇ ಆರೋಪಿಗಳು ಅಲ್ಲಿಗೆ ಬಂದು 1ನೇ ಆರೋಪಿ ಹೊಲೆಯ ಸೂಳೆ ಮಗನೇ ಎಂದು ಬೈದು, ದೊಣ್ಣೆಯಿಂದ ಬೊಲೆರೋ ವಾಹನಕ್ಕೆ ಒಡೆದು ಗಾಜನ್ನು ಒಡೆದು ಹಾಕಿರುತ್ತಾನೆ. ಪ್ರಾಸಾ.1 ಶಿವರಾಜು ಯಾತಕ್ಕೆ ಹೀಗೆ ಮಾಡುತ್ತೀರಿ ಎಂದು ಕೇಳಿದಾಗ 1ನೇ ಆರೋಪಿ ಗುದ್ದಲಿಯಿಂದ ಶಿವರಾಜುನ ತಲೆಗೆ ಹೊಡೆದ. ಆನಂದ್ ಬೆನ್ನು ಮತ್ತು ಮುಖದ ಮೇಲೆ ಕೈಯಿಂದ ಹೊಡೆದು ಹೊಲೇರ ನನ್ನ ಮಕ್ಕಳಾ, ಹತ್ತಿರಕ್ಕೆ ಸೇರಿಸಕ್ಕಿಲ್ಲ ನಿಮ್ಮನ್ನು ಎಂದು

ಬೈದು, ನೀವು ಹೀಗೇ ಮಾಡಿದರೆ ನಿಮ್ಮನ್ನು ಹೊಡೆದು ಸಾಯಿಸುತ್ತೇನೆ ಎಂದು ಬೆದರಿಕೆ ಹಾಕಿದರು. ಆಗ ನಾನು, ಪುಟ್ಟಸ್ವಾಮಿ ಮತ್ತು ಅಪ್ಪಾಜಿ ಅಲ್ಲಿ ಇದ್ದೆವು. ನಾವು ಜಗಳ ಬಿಡಿಸಿರುತ್ತೇವೆ.

2. ಬೊಲೆರೋ ವಾಹನದ ಗಾಜು ಒಡೆದಿದ್ದ ಕಾರಣ 20 ಸಾವಿರ ರೂಪಾಯಿ ನಷ್ಟವಾಗಿರುತ್ತದೆ.

(ಬೊಲೆರೋ ವಾಹನದ ಫೋಟೋವನ್ನು ಸಾಕ್ಷಿಗೆ ತೋಗಿಸಲಾಗಿ ಆರೋಪಿ ಪರ ವಕೀಲರುಗಳು ಆಕ್ಷೇಪವನ್ನು ವ್ಯಕ್ತಪಡಿಸಿದ್ದು ಸದರಿ ಫೋಟೋವನ್ನು ದೋಷಾರೋಪಣ ಪಟ್ಟಿಯೊಂದಿಗೆ ಸಲ್ಲಿಸಿರುವುದಿಲ್ಲ ಹಾಗೂ ತಮಗೆ ಅದರ ಪ್ರತಿಯನ್ನು ಒದಗಿಸಿರುವುದಿಲ್ಲ, ಈಗ ಅಭಿಯೋಜಕರು ಪ್ರಾಸಾ.1ರ ಮೂಲಕ ಸದರಿ ದಾಖಲಾತಿಯನ್ನು ಗುರುತಿಸಿಕೊಳ್ಳುವ ಸಲುವಾಗಿ ಸಿಆರ್.ಪಿ.ಸಿ., ಕಲಂ 311ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದ್ದು ಸದರಿ ಅರ್ಜಿ ಇನ್ನೂ ವಿಲೇವಾರಿಗೆ ಬಾಕಿ ಇರುತ್ತದೆ ಎಂದು ನ್ಯಾಯಾಲಯದ ಅವಗಾಹನೆಗೆ ತಂದಿರುತ್ತಾರೆ)

(ಪ್ರಶ್ನಿತ ದಾಖಲಾತಿಗೆ ಸಂಬಂಧಿಸಿದಂತೆ ಅರ್ಜಿ ಇನ್ನೂ ವಿಲೇವಾರಿಗೆ ಬಾಕಿ ಇರುವ ಕಾರಣ, ಆರೋಪಿ ಪರ ವಕೀಲರುಗಳಿಗೆ ಅದರ ಪ್ರತಿಯನ್ನು ನೀಡುವಂತೆ ಆದೇಶಿಸಿ ಈ ಸಾಕ್ಷಿಯ ಮುಂದುವರಿದ ಮುಖ್ಯವ ವಿಚಾರಣೆಗೆಗಾಗಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ.)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**